International Journal of Applied Research 2021; 7(9): 264-267




**ISSN Print:** 2394-7500
**ISSN Online:** 2394-5869
**Impact Factor:** 8.4
IJAR 2021; 7(9): 264-267
www.allresearchjournal.com
Received: 25-07-2021
Accepted: 27-08-2021

**ಲೋಹಿತ್.ಪಿ**
ಕನ್ನಡ ಸಹಾಯಕ ಪ್ರಧ್ಯಾಪಕರು
ಅಕ್ಷರ ಇನ್ಸ್ಟಿಟ್ಯೂಟ್ ಆಫ್
ಮ್ಯಾನೇಜ್‌ಮೆಂಟ್ ಸ್ಟಡೀಸ್
ಜೆ.ಎನ್.ಎನ್.ಸಿ.ಇ.ಕಾಲೇಜ್
ಎದುರು, ಸವಳಂಗ ರಸ್ತೆ, ಅಕ್ಷರ
ನಗರ ಶಿವಮೊಗ್ಗ

**Corresponding Author:**
**ಲೋಹಿತ್.ಪಿ**
ಕನ್ನಡ ಸಹಾಯಕ ಪ್ರಧ್ಯಾಪಕರು
ಅಕ್ಷರ ಇನ್ಸ್ಟಿಟ್ಯೂಟ್ ಆಫ್
ಮ್ಯಾನೇಜ್‌ಮೆಂಟ್ ಸ್ಟಡೀಸ್
ಜೆ.ಎನ್.ಎನ್.ಸಿ.ಇ.ಕಾಲೇಜ್
ಎದುರು, ಸವಳಂಗ ರಸ್ತೆ, ಅಕ್ಷರ
ನಗರ ಶಿವಮೊಗ್ಗ

# ಹನ್ನೆರಡನೆ ಶತಮಾನದ ವಚನಗಳಲ್ಲಿ ಸಾಹಿತ್ಯಕ ಸೌಂದರ್ಯ

**ಲೋಹಿತ್.ಪಿ**

ವಚನ ಶರಣರು ಕನ್ನಡಕ್ಕೆ ಕೊಟ್ಟ ಕಾಣಿಕೆ. ಈ ವಚನಗಳು ತಮ್ಮ ರೂಪ, ಸ್ವರೂಪದಿಂದ ಕನ್ನಡ ಸಾಹಿತ್ಯ ಭಂಡಾರದ ಅಮೂಲ್ಯ ರತ್ನಗಳಾಗಿ ವಿಶ್ವ ಸಾಹಿತ್ಯದ ದೃಷ್ಟಿಯಿಂದ ಕನ್ನಡದ ಬೆಲೆಯನ್ನು ಹೆಚ್ಚಿಸಿದೆ. ಶರಣರ ವಿಚಾರ ಕ್ರಾಂತಿ, ಎಲ್ಲ ರಂಗಗಳನ್ನು ವ್ಯಾಪಿಸಿ, ನವಚೇತನವನ್ನು ತುಂಬಿದೆ. ಕನ್ನಡದ ಭಾಗ್ಯದ ಬಾಗಿಲು ತಾನರಿಯದಂತೆಯೇ ತೆರೆದುಕೊಂಡಿತು. ಶರಣರು ತಮ್ಮ ಆಧ್ಯಾತ್ಮಿಕ ಸಾಧನೆಯ ಅನುಭವಗಳನ್ನೂ, ಸಮಾಜದ ರೀತಿ ನೀತಿಗಳನ್ನೂ, ಓರೆ ಕೋರೆಗಳನ್ನೂ, ಎಲ್ಲರಿಗೂ ತಿಳಿಯುವ ಮಾತುಗಳಲ್ಲಿ ಹೇಳಬೇಕಾಗಿತ್ತು. ಶರನರು ಲೋಕಕಲ್ಯಾಣಕರವಾದ ತಮ್ಮ ಉದ್ದೇಶ ಸಾಧನೆಗಾಗಿ ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಮಾರ್ಗವನ್ನೇ ರೂಢಿಸಬೇಕಾಯಿತು. ವಚನಗಳು ಪದ್ಯಗಳಲ್ಲಿ, ಗದ್ಯರೂಪವಾದವುಗಳು. ಗದ್ಯಶೈಲಿ ಅಂದಿನ ಚಂಪೂ ಗ್ರಂಥಗಳಲ್ಲಿದ್ದ ಗದ್ಯಶೈಲಿಯಲ್ಲಿ ಅಥವಾ ಆಡುಮತಿನ ನೀರಸ ನಿರೂಪಣೆಯೂ ಅಲ್ಲ, ಪದ್ಯಶೈಲಿಯ ಭಾವ ಸೌಂದರ್ಯ, ಗದ್ಯದ ವಿಚಾರ ಪ್ರತಿಪಾದನೆ, ಎರಡನ್ನೂ ಒಳಗೊಂಡ ಒಂದು ವಿಶಿಷ್ಟ ರೀತಿಯ ಗದ್ಯ ಗೀತೆಗಳೆಂದು ವಚನಗಳನ್ನು ಕರೆಯಬಹುದು.

ವಚನ ಸಾಹಿತ್ಯ ಕನ್ನಡದ ಮಹತ್ವದ ಕೊಡುಗೆ, ಭಾರತೀಯ ಭಾಷೆಗಳಲ್ಲಿ, ಬೇರೆ ಯಾವ ಭಾಷೆಯಲ್ಲೂ ಈ ಪ್ರಕಾರದ ಸಾಹಿತ್ಯವಿಲ್ಲದಿರುವುದನ್ನು ಅನೇಕ ವಿದ್ವಾಂಸರು ಗುರುತಿಸಿದ್ದಾರೆ. ವಿಶ್ವ ಸಾಹಿತ್ಯದಲ್ಲಿ, ಇದೊಂದು ಅಪರೂಪದ ಕೊಡುಗೆಯೆಂದೂ ಕೆಲವರು ಗುರುತಿಸಿದ್ದಾರೆ. ವಚನ ಸಾಹಿತ್ಯದಂತಹ ಉದಾಹರಣೆಗಳು, ಸರಳವಾಗಿ, ಕ್ವಚಿತ್ತಾಗಿ, ಬಿಡಿಬಿಡಿಯಾಗಿ ಇತರ ಭಾಷೆಗಳ ಸಾಹಿತ್ಯದಲ್ಲಿದ ಸಿಕ್ಕಬಹುದಾದರೂ, ವಚನಗಳು ಸಾಹಿತ್ಯದ ಒಂದು ಪ್ರಕಾರವಾಗಿ ಮಾರ್ಪಟ್ಟುದು ಕನ್ನಡದಲ್ಲಿಯೂ ಎಂದು ನಿಸ್ಸಂಶಯವಾಗಿ ಹೇಳಬಹುದು. ವಚನ ಸಾಹಿತ್ಯದ ಕನ್ನಡ ನುಡಿ, ವಿಶ್ವಸಾಹಿತ್ಯಕ್ಕೆ ಕೊಟ್ಟ ಅಪೂರ್ವ ಕಾಣಿಕೆಯೆಂದು ಕನ್ನಡಿಗರು ಹೆಮ್ಮೆಪಡಬಹುದಾಗಿದೆ ಎಂದು ಹೇಳಿದ ಪ್ರೋ ಶಿ.ಶಿ. ಬಸವನಾಳರ ಮಾತು ಸತ್ಯವಾಗಿದೆ. ಕನ್ನಡದ ವಿಶಿಷ್ಟ ರೂಪವಾದ, ಬಸವಣ್ಣನವರಿಗಿಂತ ತುಸುಮುಂಚಿತವಾಗಿ ಪ್ರಾರಂಭವಾದ ವಚನ ರಚನೆ, ಬಸವಣ್ಣ ಹಾಗೂ ಅವರ ಸಮಕಾಲೀನರ ಅಭಿವ್ಯಕ್ತಿಯ ಮಾಧ್ಯಮವಾಯಿತು. ಅದರಿಂದಾಗಿ ವಚನ ಸಾಹಿತ್ಯಕ್ಕೆ ಆಳ ವಿಸ್ತಾರಗಳು ದೊರಕಿದವು. ವಚನ ಸಾಹಿತ್ಯ ಕನ್ನದ ಸಾಹಿತ್ಯದ ಒಂದು ಅನನ್ಯವಾದ ಪ್ರಕಾರವಾಗಿದ್ದರೂ ಅದನ್ನು ಸೃಷ್ಟಿಸಿದವರು ಕೇವಲ ಸಾಹಿತಿಗಳಾಗಿರಲಿಲ್ಲ. ಅವರೆಲ್ಲ ಸತ್ಯಾನ್ವೇಷಿಗಳಾಗಿದ್ದರು. ಆಧ್ಯಾತ್ಮ ಸಾಧಕರಾಗಿದ್ದರು.

ಮನುಷ್ಯ ಹುಟ್ಟಿನಿಂದ ಸಾಯುವವರೆಗೂ ತನ್ನ ಹೊಟ್ಟೆ ತುಂಬಿಸಲು ಏನೆಲ್ಲಾ ಹರಸಾಹಸ ಮಾಡುತ್ತಾನೆ, ಒಬ್ಬ ವ್ಯವಸಾಯ ಮಾಡುತ್ತಾನೆ, ಒಬ್ಬ ಮರದ ಕೆಲಸ ಮಾಡುತಾನೆ ಮತ್ತೊಬ್ಬ ಬಟ್ಟೆ ಹೊಲೆಯುತ್ತಾನೆ, ಮಗನೊಬ್ಬ ಚಪ್ಪಲಿ ಹೊಲೆಯುತ್ತಾನೆ. ಹೀಗೆ ಬದುಕಲೊಂದು ನೆಪ ಈ ಕಾಯಕ. ಮಾದಿಗ, ಕಮ್ಮಾರ, ಕುಂಬಾರ, ಒಕ್ಕಲಿಗ ಯಾರೇ ಆಗಿರಲಿ ಅವರು ತಮ್ಮ ಕಾಯಕವನ್ನು ಮನ ಮೆಚ್ಚುವಂತೆ ಮಾಡಿದರೆ ಅದೇ ಸ್ವರ್ಗ ಎಂಬುದು ಬಸವಣ್ಣನವರ ತತ್ವ.

ಮನೆ ನೋಡಾ ಬಡವರು, ಮನ ನೋಡಾ ಘನ
ಸೋಂಕಿನಲ್ಲಿ ಶುಚಿಃ ಸರ್ವಾಂಗ ಕಲಿಗಳು.
ಪಸರಕ್ಕನುವಿಲ್ಲ: ಬಂದ ತತ್ಕಾಲಕ್ಕೆ ಉಂಟು
ಕೂಡಲಸಂಗನ ಶರಣರು ಸ್ವತಂತ್ರ ಧೀರರು.

ಎಂದು ಬಸವಣ್ಣನವರು ಕಾಯಕ ಜೀವಿಗಳ ವ್ಯಕ್ತಿತ್ವದ ಕುರಿತು ಕಣ್ಣಿಗೆ ಕಟ್ಟುವಂತೆ ಹೇಳಿದ್ದಾರೆ. ಇಡೀ ಬ್ರಹ್ಮಾಂಡವು ಕಾಯಕ ತತ್ವದ ಮೇಲೆ ನಿಂತಿದೆ. ಭೂಮಿಯು ಸೂರ್ಯನ ಸುತ್ತ ತಿರುಗುವ ಕಾಯಕ ಮಾಡುವುದು. ಸೂರ್ಯ ಬೆಳಕನ್ನು ಕೊಡುವ ಕಾಯಕ ಮಾಡುವುದು. ಚಂದಿರ ಬೆಳದಿಂಗಳನ್ನು ಕೊಡುವನು, ನದಿಗಳು ಸಮುದ್ರದಲ್ಲಿ ಸೇರುವ ಕಾಯಕದಲ್ಲಿ ತೊಡಗಿದೆ, ಸೂರ್ಯನ ತಾಪಕ್ಕೆ ಸಮುದ್ರದ ನೀರು ಆವಿಯಾಗುವುದು, ಮೋಡವಾಗುವುದು, ಮಳೆಯಾಗುವುದು ಆ ಮೂಲಕ ಸಕಲ ಜೀವರಾಶಿಗಳಿಗೆ ನೀರಾಗುವುದು. ಹೀಗೆ ಎಲ್ಲವೂ ತಮ್ಮ ತಮ್ಮ ಕಾಯಕದಲ್ಲಿ ನಿರತವಾಗಿರುತ್ತವೆ. ಇನ್ನೂ ರೈತ ತನ್ನ ಚಿತ್ತನೆಯ ಕಾಯಕದಲ್ಲಿ ತೊದಗಿದ್ದಾರೆ. ವಿಶ್ವ ಕರ್ಮ, ಕುಂಬಾರ, ಚಮ್ಮಾರ ತಮ್ಮ ಮೊದಲಾದ ಶ್ರಮಿಕ ವರ್ಗದವರು ತಮ್ಮ ರಕ್ತವನ್ನು ಬೆವರಿನಿಂದ ಹರಿಸಿ ಸಕಲ ಜೀವಾತ್ಮಗಳಿಗೆ ಲೇಸನ್ನು ಮಾಡುವರು. ಈ ಎಲ್ಲವೂಗಳ ಕಾಯಕದ ಪರಿಣಾಮ ನಮಗೆ ದಾಸೋಹ ರೂಪದಲ್ಲಿ ಸಿಗುತ್ತದೆ. ಇವು ನಿಷ್ಠೆಯವಾದರೆ ಲೋಕ ನಿರ್ಮಾಣವಾಗುವುದು. ಕಾಯಕ ನಿಸರ್ಗ ತತ್ವವಾಗಿದೆ. ಮಾನವನು. ಮಾನವನು ನಿಸರ್ಗದ ಭಾಗವಾಗಿದ್ದಾನೆ. ಹಾಗಾಗಿ ಆತ ಕಾಯಕ ಬಿಟ್ಟು ಬದುಕುವಂತಿಲ್ಲ ಎಂದು ವಚನ ಸಾಹಿತ್ಯ ಸಾರುತ್ತದೆ.

ಮಲ್ಲಿಕಾರ್ಜುನನನ್ನು ಕಂಡುಕೊಳ್ಳುವಲ್ಲಿಯೂ, ಅಕ್ಕಮಾಹಾದೇವಿಯ ಪ್ರಕೃತಿ ಪ್ರೇಮ ನಿಸರ್ಗದ ಬಗೆಗಿನ ಒಲವುಗಳನ್ನು ವಿಸ್ಮಯ ಭಾವನೆಗಳನ್ನು ಕೆಲವು ವಚನಗಳಿಂದ ನಾವು ನೋಡಬಹುದು.

ಈಳೆ, ನಿಂಬು, ಮಾವು ಮೊದಲಕ್ಕೆ  
ಹುಳಿನೀರೆನೆರೆದವರಾರಯ್ಯ  
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ  
ಸಿಹಿನೀರುನೆರೆದವರಾರಯ್ಯ ..........

ಈ ವಚನಗಳಲ್ಲಿ ಕಂಡುಬರುವ ಪ್ರಕೃತಿಯ ವೈವಿಧ್ಯ ಅವಳ ಮನಸ್ಸನ್ನು ಸೂರೆಗೊಂಡಿದೆ. ಇವುಗಳ ಅಂತರ್ಯದಲ್ಲಿಯೇ ತನ್ನ ಆರಾಧ್ಯ ದೈವವನ್ನು ಕಂಡುಕೊಳ್ಳಲು ಅಕ್ಕ ಪ್ರಯತ್ನಿಸುತ್ತಾಳೆ, ದೃಷ್ಟಾಂತಗಳ ಮೂಲಕ ಪರಮಾತ್ಮನ ಇರುವಿಕೆಯನ್ನು ಚಿತ್ರಿಸಿರುವುದು ಅವಳ ಕಲ್ಪಕ ಶಕ್ತಿಗೆ, ಪ್ರತಿಭಾಸೃಷ್ಟಿಗೆ ಒಂದು ಕುರುಹಾಗಿದೆ.

ಬದುಕಿನಲ್ಲಿ ಬರುವ ಅನೇಕ ಎಡರು ತೊಡರುಗಳನ್ನು ಧಿಕ್ಕರಿಸಿದ ಸ್ವಾಭಿಮಾನ ಅಕ್ಕ ಬದುಕಿನಲ್ಲಿ ಬರುವ ಎಲ್ಲಾ ಪ್ರತಿರೋಧವನ್ನು ಒಳಗಿನ ವಚನ ಮನಮುಟ್ಟುವಂತೆ ವರ್ಣಿಸುತ್ತದೆ. ಹಾಗೆಯೇ ದೃಷ್ಟಾಂತದ ಮೂಲಕ ಬದುಕಿನ ನೈಜಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಒಂದು ಪ್ರತಿಮೆಯಾಗಿದೆ.

ಬೆಟ್ಟದ ಮೇಲೊಂದು ಮನೆಯಮಾಡಿ  
ಮೃಗಗಳಿಗಂಜಿದಡೆಂತಯ್ಯಾ?  
ಸಮುದ್ರದ ತಡಿಯಲೊಂದು ಮನೆಯಮಾಡಿ  
ನೊರೆ-ತೆರೆಗಳಿಗಂಜಿದಡೆಂತಯ್ಯ?

ಕೆಲವು ವಚನಗಳಲ್ಲಿ ಅನುಭವ ಹರಳುಗಟ್ಟಿರುವುದು, ಅವಳ ಸಾಹಿತ್ಯ ಸೌಂದರ್ಯವನ್ನು ಹೆಚ್ಚಿಸುತ್ತದೆ. ಚನ್ನಮಲ್ಲಿಕಾರ್ಜುನನ್ನು ಕಾನಲು ಹೊರಟಿರುವ ಅವಸ್ಥೆಯಲ್ಲಿ ಪ್ರಕೃತಿಯ ಚರಾಚರ ವಸ್ತುಗಲನ್ನು ಪ್ರಶ್ನಿಸುವ ಅವರ ಮೊರೆಹೋಗುವ ರೀತಿಯನ್ನು ನೋಡಿದಾಗ ಅದು ಭಾವಗೀತೆಯ ಲಕ್ಷಣವನ್ನು ಸೂಚಿಸುತ್ತದೆ. “ಗಿರಿಯಾಳು ವನದೊಳು ಗಿಡಗಿಡದತ್ತ ಜೀವ, ಎನ್ನ ದೇವ, ಬಾರಯ್ಯ, ತೋರಯ್ಯ ನಿಮ್ಮ ಕರುಣೇನೆಂದು” ಎಂಬಲ್ಲಿ.

ಅಳಿಸುಂಕುವೇ ಮಾಮರನೇ, ಬೆಳದಿಂಗಳೆ ಕೋಗಿಲೇಯೇ  
ನಿಮ್ಮೆಲ್ಲರನು ಒಂದ ಬೇಡುವೆನು

ಎನ್ನೊಡೆಯ ಚನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೆ ಎಂದು ಹೇಳುವಲ್ಲಿ ವ್ಯಕ್ತವಾಗಿರುವ ಭಾವತೀವ್ರತೆ ಮನಸ್ಸನ್ನು ಸೆರೆಹಿಡಿಯುವಂತಹದು.

ನಿಸರ್ಗದ ವಸ್ತುಗಳನ್ನು ತನ್ನ ಭಾವನೆಗಳ ಅಭಿವ್ಯಕ್ತಿಯಾಗಿ ಬಳಸಿಕೊಳ್ಳುವಲ್ಲಿ ಮಹಾದೇವಿಯು ತೋರಿದ ಹಿರಿಮೆ. ಓದುಗರನ್ನು ಆಕರ್ಷಿಸುತ್ತದೆ. ಪ್ರಕೃತಿಯ ವಸ್ತುಗಳು ಉಪಮಗಳಾಗಿ, ದೃಷ್ಟಾಂತಗಳಾಗಿ ಮೇಲಿಂದ ಮೇಲೆ ಮಹಾದೇವಿಯ ವಚನಗಳಲ್ಲಿ ಕಂಡುಬರುತ್ತದೆ.

ಶಬ್ದಕ್ಕೆ ನಾಚಿದಡೆಂತಯ್ಯ  
ಚನ್ನಮಲ್ಲಿಕಾರ್ಜುನನ ದೇವ ಕೇಳಯ್ಯ  
ಲೋಕದೊಳಗೆ ಹುಟ್ಟಿದ ಬಳಿಕ  
ಸ್ತುತಿ-ನಿಂದೆಗಳು ಬಂದರೆ  
ಮನದಲ್ಲಿ ಕೋಪದ ತಾಳದೆ

ಸಮಧಾನಿಯಾಗಿರಬೇಕು. ಸಮಾಜದ ಸ್ತುತಿ ನಿಂದೆಗಳನ್ನು ಸಮಾಧಾನದಿಂದ ಸ್ವೀಕರಿಸಬೇಕೆಂಬ ಅಕ್ಕಮಹಾದೇವಿ ಜ್ಞಾನಿ. ಪ್ರಕೃತಿ ವಿಕೋಪಗಳನ್ನು ಹಸಿವು, ತೃಷೆಗಳನ್ನು ವೀರಿನಿಲ್ಲುವ ಎದೆಗಾರಿಕೆಯುಳ್ಳವಳು. ಅವಳ ಈ ದಿಟ್ಟ ಎದೆಗಾರಿಗೆ ಸಮರ್ಪಣ ಭಾವವೇ ಮುಖ್ಯ ಕಾರಣವಾಗಿದೆ.

ಸೂಕ್ಷ್ಮಸಂವೇದನಾಶೀಲಳಾದ ಅಕ್ಕ ತನ್ನ ಅಂದಂದಿನ ಅವತ್ತಿನ ಅನುಭವಗಳಿಗೆ ವಚನಗಳು ಆಕಾರ ಕೊಟ್ಟಿರುವುದರಿಂದ ಅವಳ ವಚನಗಳು ಒಂದಲ್ಲ ಒಂದು ರೀತಿಯಲ್ಲಿ ಕವಿತೆಯ ಹೊಳಹುಗಳಾಗಿ ಕಂಡುಬರುತ್ತವೆ. ಅಲ್ಲಿಗಲ್ಲಿಗೆ ಬರುವ ಉಪಮೆ, ದೃಷ್ಟಾಂತಗಳು, ಜೀವನದ ಸಾರಭಕ್ತಿಗಳು ಅರ್ಥವಂತಿಕೆಯಿಂದ ಹೆಚ್ಚಿನದಾಗಿ ಕಾವ್ಯದ ಧ್ವನಿಶಕ್ತಿಯಿಂದ ಎಲ್ಲರ ಗಮನ ಸೆಳೆಯುತ್ತವೆ. ಕೆಲವು ವಚನಗಳಂತೂ ಅದರಲ್ಲೂ ಕೆಲವೊಂದು ಉಕ್ತಿಗಳಂತೂ ಕಣ್ಣು ಕೋರೈಸಿ, ಕೋಲ್ಮಿಂಚಿನ ಶಕ್ತಿಯನ್ನು ಹೊಂದಿದೆ.

ನಾಳೆ ಬರುವುದು ನಮಗಿಂದೇ ಬರಲಿ  
ಇಂದು ಬರುವುದು ನಮಗೀಗಲೆ ಬರಲಿ  
ಆಗಾಗ ಎನ್ನದಿರು ಚನ್ನಮಲ್ಲಿಕಾರ್ಜುನ

ಇದು ಅಕ್ಕನ ಕಾವ್ಯ ವೈಶಿಷ್ಟ ಜೀವನ ಪ್ರೀತಿ, ಅದನ್ನು ಎದುರಿಸುವ ಧಾಷ್ಟರ್ತ್ಯ, ಮನುಷ್ಯನ ಚಲನವಲನಗಳಲ್ಲಿ ಜಗತ್ ಬಾಲಕನ ಲೀಲೆಯಂತೆ ನಡೆಯುತ್ತದೆ ಎಂದು ತನ್ನ ಅನುಭವದ ಹಿನ್ನೆಲೆಯಲ್ಲಿ ಮಹಾದೇವಿ ಹೀಗೆ ಹೇಳುತ್ತಾಳೆ.

ಕಾವ್ಯಮಯವಾದ ವಾಸ್ತವದ ವಿವರನೆಗಳಿಂದ ತತ್ವ ಚಿಂತನೆಗಳಿಂದ ಕೂಡಿರುವ ವಚನಗಳಿರುವಂತೆ, ಬೆಡಗಿನ ವಚನಗಳೂ ಇವೆ ಅವಳ ಎಲ್ಲಾ ವಚನಗಳು ಅನುಭಾವದ ಸ್ತರಕ್ಕೆ ಸಂಬಂಧಿಸಿದರೂ ಕೂಡ, ಅಲ್ಲಲ್ಲಿ ಅಮೂರ್ತವಾದ ಅನುಭಾವದ ವಿಷಯಗಳನ್ನು ಕೆಲವು ಸಂಕೇತ ಪ್ರತಿಮೆಗಳ ಮೂಲಕ ಚಿತ್ರಿಸುವುದು ಮಹಾದೇವಿಯಕ್ಕನ ವಚನಗಳ

ವೈಶಿಷ್ಟ್ಯ ಇಂತಹ ಒಂದೆರಡು ವಚನಗಳನ್ನು ವಿಶ್ಲೇಷಿಸಬಹುದು.

ಜಲದ ಮಂಟಪದ ಮೇಲೆ ಉರಿಯ ಚಪ್ಪರವನಿಕ್ಕಿ
ಆಲಿಕಲ್ಲ ಹಸೆಯವಾಸಿ ಭಾಸಿಗವ ಕಟ್ಟಿ
ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡ ಬಂದು ಮದುವೆಯಾದೆನು
ಎಂದೆಂದೂ ಬಿಡದೆ ಬಾಳುವೆಗೆ ಕೊಟ್ಟರೆನ್ನ ......

ಆಲದ ಮಂಟಪ ಉರಿಯ ಚಪ್ಪರ ಅಲಿಕಲ್ಲು ಹಸೆ ಇವೆಲ್ಲ ಆಕಾರವಿಡಿದು, ಆಕಾರ ಕಳೆದುಕೊಳ್ಳುವ ವ,ತುಗಳು, ಕಾಲಿಲ್ಲದ ಹೆಂಡತಿ ತಾರ್ಕಿಕ ವ್ಯಕ್ತಿಯನ್ನು ಸೂಚಿಸಿದರೆ ತಲೆಯಿಲ್ಲದ ಗಂಡ ಪಾರಮಾರ್ಥಿಕ ಪರತತ್ವವನ್ನು ಸೂಚಿಸುವುದು. ಇಲ್ಲಿಯ ಮದುವೆ ಜೀವ ಮತ್ತು ಶಿವನ ಸಾಮರಸ್ಯವೇ ಆಗಿದೆ.
ಚನ್ನಮಲ್ಲಿಕಾರ್ಜುನ ಎಂಬುದು ವಚನದ ಕೊನೆಗೆ ಜೋಡಿಸಲೇ ಬೇಕಾದ ವಚನ ರಚನಾ ಸಂಪ್ರದಾಯದ ಜಡ ಅಂಕಿತವಲ್ಲ. ಅಕ್ಕಮಹಾದೇವಿಯ ತನು, ಮನ, ಪ್ರಾನಗಳೇ ಆತ ಆ ತನ್ನ ಯತೆಯೇ ಅವನನ್ನು ಸಾಕಾರವಾಗಿಯೂ ನಿರಾಕಾರವಾಗಿಯೂ ಚಿತ್ರಿಸುವಲ್ಲಿನ ಪ್ರೇರಣೆ ಅವಳ ಪತಿ ಪಾರಮಾರ್ಥಿಕ ನೆಲೆಯವನು. ಭೌತಿಕವಾಗಿ ಇಲ್ಲವೆನಿಸುವವನು. ಅಂಥವನ ಸೊಬಗನ್ನು ಅಕ್ಕ ಕಟ್ಟುಕೊಡುವ ಶಬ್ಧಗಳಲ್ಲಿ ಇಡೀ ವಚನದ ಜೀವವೇ ಆತನಾಗಿ ಬಿಡುವ ರೀತಿ ಅನ್ಯಾದೃಶವಾದದ್ದು. ಚನ್ನಮಲ್ಲಿಕಾರ್ಜುನನ ಕಂಡು ಕನಸು ತಿಳಿದೆದ್ದಂತೆ ಹೊಸ ದರ್ಶನ ಪಡೆದ ಅನುಭವವನ್ನು ಕಟ್ಟಿಕೊಡುವ ಈ ವಚನ ಅಕ್ಕನ ಅತ್ಯಂತ ಸುಂದರ ವಚನಗಳಲ್ಲಿ ಒಂದೆನಿಸಿದೆ.
ಅಕ್ಕ ಕೇಳವ್ವ, ಅಕ್ಕಯ್ಯ, ನಾನೊಂದು ಕನಸಕಂಡೆ

ಅಕ್ಕಿಯಡಕೆ ಓಲೆ ತೆಂಗಿನಕಾಯೆ ಕಂಡೆ
ಚಿಕ್ಕ ಚಿಕ್ಕ ಜಡೆಗಳ ಸುಲುಪಲ್ಲ ಗೊರವನು
ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವ .........

ತುಂಬ ಸಂಭ್ರಮದಿಂದ ಅದ್ಭತ ಕನಸೊಂದನ್ನು ತಾನು ಕಂಡುದುದನ್ನು ಆಪ್ತಗೆಳತಿಗೆ ಹೇಳಿಕೊಳ್ಳುವಂಥ ರೀತಿಯಲ್ಲಿ ಈ ವಚನವಿರುವುದು. ಪ್ರತಿ ಸಾಲಿನಲ್ಲಿ ಇಂಥ ಸಂಭಾಷಣೆಯ ಧ್ವನಿ ಬಂದಲಾಗುತ್ತ ಹೋಗುತ್ತದೆ. ಆಕೆಯ ಮಧುರಭಾವ, ಲಿಂಗ ಮತ್ತು ಭಕ್ತರ ಸಂಗದ ನೆಲೆಗೆ ಮೀರಿ ಉತ್ಕಟ ಪ್ರಣಯದ ತೀವ್ರತೆ ಆದ್ರತೆಗಳನ್ನು ಪಡೆದುಕೊಳ್ಳುವುದು ವಿಶಿಷ್ಟವೇ. ಅಕ್ಕನ ಕಣ್ಣಿಗೆ ಆತ ಸರ್ವೇದ್ರಿಯ ಸಾಕಾರ ಸುಂದರನಾಗಿಯೇ ಕಾಣುತ್ತಾನೆ. ಆತನೊಂದಿಗೆ ಈಕೆ ಒಂದಾಗುವ ಸ್ಥಿತಿ ಕೇವಲ ಬಯಲ ಅಥವಾ ಬೆಳಕಿನ ಅಥವಾ ಕೇವಲ ಜ್ಯೋತಿಯ ಸ್ಥಿತಿ ಮಾತ್ರವಾಗದೆ ಅದು ಉತ್ಕಟವಾದ ಪ್ರಣಯನುಭವವಾಗಿದ್ದು, ಶೃಂಗಾರದ ರೂಪಕಗಳ ಮೂಲಕವಾಗಿಯೇ ವರ್ಣಿತವಾಗಿದೆ.

ತನು ಕರಗದವರಲ್ಲಿ
ಮಜ್ಜನವ ನೊಲ್ಲೆಯಯ್ಯಾ ನೀನು
ಮನ ಕರಗದವರಲ್ಲಿ
ಪುಷ್ಪವನೊಲ್ಲೆಯಯ್ಯಾ ನೀನು ........

ಒಂದು ಪರಿಶುದ್ಧ ಭಾವಗೀತೆಯಂತೆ ಈ ವಚನವಿದೆ. ಇಡಿಯ ವಚನದ ಮುಖ್ಯ ಕ್ರಿಯೆಗಳು ಕರಗು ಹದುಳು ಕಣ್ಣಿರ ಭಾವ ಶುದ್ಧವಾಗುವಿಕೆ, ಪರಿಣಾಮಿತ್ವ ತ್ರಿಕರಣ ಶುದ್ಧಿ, ಅಂತ ಕರಣಗಳ ಮೆಟ್ಟಿಲುಗಳ ಮೂಲಕ ಭಕ್ತಿಯ ಸಾಧನೆಯನ್ನು ಹೇಳುತ್ತವೆ. ಅಭಿಷೇಕ ಪುಷ್ಪ, ಗಂಧಾಕ್ಷತೆ, ಆರತಿ, ಧೂಪ, ನೈವೇದ್ಯ, ತಾಂಬೂಲಾದಿಗಳ ಅರ್ಪಣೆ ಪೂಜೆಯೊಂದನ್ನು ಸಮಗ್ರವಾಗಿಸುವ ಹೊರಗಿನ ಪದಾರ್ಥಗಳು. ಕ್ರಿಯಾವಿಧಿಗಳು. ಆದರೆ ಬಹಿರಂಗದ ಈ ಭಕ್ತಿಯ ಅಭಿವ್ಯಕ್ತಿ ಅಂತರಂಗದ ಶುದ್ದಿಯೊಂದಿಗೆ ಸೇರಿದಾಗ ಮಾತ್ರ ಅರ್ಥಪೂರ್ಣ ಚನ್ನಮಲ್ಲಿಕಾರ್ಜುನನಿಗೆ ಪ್ರಿಯವಾದದ್ದು ಒಳ ಹೊರಗಿನ ಶುಧ್ಧಿಯಿಂದ ಕೂಡಿದ ಭಕ್ತಿ, ಅದು ಇಲ್ಲವಾದವರಿಗೆ ಆತ ಒಲಿಯಲಾರ ಎಂಬ ವಿಮರ್ಶೆ, ಚಿಂತನೆ ಇಲ್ಲಿದೆ.
ದಯವೇ ಧರ್ಮದ ಮೂಲವೆಂದು ಸಾರಿದ ಬಸವಣ್ಣನ ಅಹಿಂಸಾತತ್ವವನ್ನು ಮಹಾದೇವಿ ಜಾಲಗಾರನ ದೃಷ್ಟಾಂತದೊಂದಿಗೆ ಈ ಕೆಳಕಂಡಂತೆ ಚಿತ್ರಿಸುತ್ತಾಳೆ.

ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ
ಹಲವು ಪ್ರಾಣಿಯ ಕೊಂದು ನಲಿನಲಿದಾಡುವ
ತನ್ನ ಮನೆಯಲೊಂದು ಶಿಶು ಸತ್ತಡೆ
ಅದೆಂತೆಂದಡೆ

ಜಾಲಗಾರನ ದುಃಖ ಜಗಕ್ಕೆಲ್ಲ ನಗೆಗೆಡೆ. ಇದು ಕಾರಣ, ಚನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿರ್ದು ಜೀವಹಿಂಸೆ ಮಾಡುವ ಮಾದಿಗರನೇಸಿನೆಂಬೆನಯ್ಯಾ. ಪ್ರಾಣಿಗಳನ್ನು ಕೊಂದಾಗ ನಲಿನಲಿದಾಡುವ ಮನುಷ್ಯ, ತನ್ನ ಶಿಶುಸತ್ತಾಗ ಮರುಗುವ ಠೌಕಿಕ ವಿಪರ್ಯಾಸವನ್ನು ಹೇಳಿರುವುದರಿಂದ ಇದೊಂದು ವೈಶಿಷ್ಟಪೂರ್ಣವಾದ ಅಭಿವ್ಯಕ್ತಿಯ.
ಅಕ್ಕಮಹಾದೇವಿ ಕನ್ನಡದ ಅನುಭಾವಿಗಳಲ್ಲಿ ತನ್ನದೇ ವೈಶಿಷ್ಟ್ಯದಿಂದ ಬೆಳಗುತ್ತಿರುವ ಶುಕ್ರತಾರೆ, ವಚನ ಸಾಹಿತ್ಯದಲ್ಲಿ ಅವಳ ವಾಣಿಗೆ ಅವಳದೇ ಹೊಳಪು, ತೇಜಸ್ಸುಗಳಿವೆ. 'ಅಕ್ಕನೊಂದು ಮಹಿಳಾ ಸೃಷ್ಟಿಯ ಅದ್ಭುತ' ಎಂದು ಸಿದ್ದಯ್ಯ ಪುರಾಣಿಕರು ಬಣ್ಣಿಸಿದ್ದಾರೆ. ಅದು ಸತ್ಯವನ್ನೇ ನಿರೂಪಿಸುವ ಉಕ್ತಿ. ಏಕೆಂದರೆ ಅಕ್ಕನ ಅಗಾಧವಾದ ಭಾಷಾ ಸಾಮರ್ಥ್ಯ. ಸುಸಂಸ್ಕೃತ ಭಾವ, ಪ್ರತಿಪಾದನೆಯ ಪರಿಣತಿಗಳು, ಆಕೆಯ ವೈವಿಧ್ಯಮಯವೂ, ವ್ಯಾಪಕವೂ ಆದ ಜೀವಾನುಭವಕ್ಕೆ ಸಹಜತೆಯನ್ನು ನೀಡುತ್ತವೆ. ಬದುಕಿನ ಚಿರಂತನ ಮೌಲ್ಯಗಳ ಅನ್ವೇಷಣೆ ನಡೆಸುವ ಅಕ್ಕನ ವಚನಗಳು ವಾಚ್ಯವೆನಿಸಿದರೂ ನಿಗೂಢವಾದ ವಿಶಿಷ್ಟಾರ್ಥ ತರಾವರಿಗಳನ್ನು ಹೊರಡಿಸಬಲ್ಲ ಧನಿಶಕ್ತಿಯಿಂದ ಗಮನಾರ್ಹವಾಗಿವೆ. ಅಕ್ಕನ ವಚನಗಳು. ಭಕ್ತಿ ಸಾಧನೆಗಳ ನಿಜವಾದ ಸ್ವರೂಪವನ್ನೂ ವಿಮರ್ಶಿಸುತ್ತಾ ಚಿಂತನೆಯೇ ಕಾವ್ಯಾವಾಗಿ ಬಿಡುತ್ತದೆ.

**ಪರಾಮರ್ಶನ ಗ್ರಂಥಗಳು**


1. ಮಧ್ಯಕಾಲೀನ ಕನ್ನಡ ಸಾಹಿತ್ಯ (ಸಮಕಾಲೀನ ಅನುಸಂಧಾನ) – ಡಾ. ಡಿ.ಕೆ. ಚಿತ್ತಯ್ಯ ಪೂಜಾರ್ ೨೦೧೯.
2. ವಚನ ಸಾಹಿತ್ಯ ಚರಿತ್ರೆ ಸಂಪುಟ ೪ – (ಪ್ರ.ಸಂ) ಕೆ.ವಿ. ಪುಟ್ಟಪ್ಪ.
3. ವಚನ ಸಾಹಿತ್ಯ (ಸಂಪುಟ–೫) – ಎಂ. ಚಿದಾನಂದಮೂರ್ತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫.
4. ವಚನ ಸಾಹಿತ್ಯ – ಪ್ರೊ.ಜಿ.ಎಸ್.ಸಿದ್ಧಲಿಂಗಯ್ಯ, ಸ್ವಪ್ನ ಬುಕ್ ಹೌಸ್, ಬೆಂಗಳೂರು.
5. ಅಕ್ಕನ ವಚನಗಳು – ಡಾ. ಎಲ್. ಬಸವರಾಜು, ಗೀತಾ ಬುಕ್ ಹೌಸ್, ಮೈಸೂರು, ೧೯೯೭.

6. ಮಧ್ಯಕಾಲೀನ ಕನ್ನಡ ಸಾಹಿತ್ಯ – ಪ್ರಸಾರಾಂಗ, ಮೈ.ವಿ.ವಿ
7. ಶರಣರ ಅನುಭಾವ ಸಾಹಿತ್ಯ – ಡಾ.ಎಚ್. ತಿಪ್ಪೇರುದ್ರಸ್ವಾಮಿ.